| ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ | | |
|---|---|---|
| (ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ) | | |
| ನಿಗಮ ಕಛೇರಿ ವಿಳಾಸ :<br>ನಂ.29, ವಿಜಯನಗರ 2ನೇ ಹಂತ,<br>ಹಿನಕಲ್<br>ಮೈಸೂರು–570017<br>Email: www.cescmysore.org<br>CIN:U40109KA2004SGC035177 | | ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ರವರ ಕಛೇರಿ<br>ಕಾ ಮತ್ತು ಪಾ ಉಪ– ವಿಭಾಗ,<br>ಗಂಡಸಿ–573119<br>ಫೋನ್: 08174–235695<br>Email: aee gnd@cescmysore.org |



ಸಂಖ್ಯೆ :–ಸ.ಕಾ.ಇಂ(ವಿ)/ಸ.ಇಂ(ತಾ)/21–22/ 2230 ದಿನಾಂಕ : 23/12/2021.

7/1/22

ದಿನಾಂಕ: 22–12–2021 ರಂದು ಮಧ್ಯಾಹ್ನ 11:00 ಗಂಟೆಗೆ ಕಾರ್ಯಪಾಲಕ ಇಂಜಿನಿಯರ್(ವಿ), ಅರಸೀಕೆರೆ, ಕಾರ್ಯ ಮತ್ತು ಪಾಲನೆ ವಿಭಾಗ ಕಛೇರಿ, ಚಾ.ವಿ.ಸ.ನಿ.ನಿ. ರವರ ಅಧ್ಯಕ್ಷತೆಯಲ್ಲಿ ಗಂಡಸಿ ಉಪ–ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು,

1. ಶ್ರೀ ಕಾರ್ತಿಕ, ಕಾರ್ಯಪಾಲಕ ಇಂಜಿನಿಯರ್(ವಿ) ಕಾ ಮತ್ತು ಪಾ, ಚಾ.ವಿ.ಸ.ನಿ.ನಿ. ಅರಸೀಕೆರೆ ವಿಭಾಗ.
2. ಶ್ರೀಮತಿ, ಚಂದ್ರಮ್ಮ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಗಂಡಸಿ ಉಪ–ವಿಭಾಗ.
3. ಶ್ರೀ ಷಣ್ಮುಖ ಸಹಾಯಕ ಇಂಜಿನಿಯರ್(ವಿ) ಗಂಡಸಿ. ಶಾಖೆ.

3 ಶ್ರೀ ಯೋಗಣ್ಣ, ಕೆ.. ಕಿರಿಯ ಇಂಜಿನಿಯರ್(ವಿ) ಬಾಗೇಶಪುರ.

4. ಶ್ರೀ ಮಂಜುನಾಥ್ ಎಸ್.ಎನ್. ಹಿರಿಯ ಸಹಾಯಕಗಂಡಸಿ.
5. ಮಂಜುನಾಥ್ ಬಿ.ಎಲ್, ಪ್ರಭಾರಿ ಕಿರಿಯ ಇಂಜಿನಿರ್(ತಾ), ಗಂಡಸಿ ಉಪ–ವಿಭಾಗ.

.ಸಭಾ ನಡಾವಳಿ

1. ಹೊನ್ನಕುಮಾರನಹಳ್ಳಿಯ ತೋಟದ ಮನೆಯಲ್ಲಿ ವಾಸವಿರುವ ಗ್ರಾಹಕರುಗಳಿಗೆ ಹಾಲಿ ಐ.ಪಿ. ಫೀಡರ್ ನಲ್ಲಿ ವಿದ್ಯುತ್ ಸರಬರಾಜು ಆಗುತ್ತಿದ್ದು, ಈಗ ಅವರುಗಳು ಸ್ವಂತ ಕಾಮಗಾರಿಯಡಿಯಲ್ಲಿ ನಿರಂತರ ಕುಡುಕುಂದಿ 11 KV ಪೂರಕದಿಂದ ವಿದುತ್ ಸಂಪರ್ಕ ಪಡೆಯಲು ವೆಚ್ಚವನ್ನು ಸ್ವಂತ ಖರ್ಚಿನಿಂದ ಬರಿಸಲು ಸಿದ್ದರಿದ್ದು, ಅರ್ಜಿಯನ್ನು ಶಾಖಾಧಿಕಾರಿಗಳಿಗೆ ರವಾನಿಸಿ, ಸ್ವಂತ ಕಾಮಗಾರಿಯಡಿಯಲ್ಲಿ ಅಂದಾಜು ಪಟ್ಟಿ ತಯಾರಿಸಿ ಸಲ್ಲಿಸಲು ಸೂಚಿಸಲಾಯಿತು,
2. ಈ ಸ್ವತ್ತು ಪಡೆಯಲು ಸ್ವಾಮಿ ಎಂಬುವರು ತಮ್ಮ ಮನೆಯ ಆರ್.ಆರ್. ಸಂಖ್ಯೆಯಾದ GNL–112 ರ ಸ್ಟೇಟ್‌ಮೆಂಟ್ ಪಡೆಯಲು ಹಿರಿಯ ಸಹಾಯಕ ರವರ ಗಮನಕ್ಕೆ ತರಲಾಯಿತು.
3. ಮಾವಿನಕೆರೆ ವ್ಯಾಪ್ತಿಯಲ್ಲಿರುವ 63 ಕೆ.ವಿ.ಎ. ಪರಿವರ್ತಕ ವಿಫಲವಾಗಿದ್ದು ಅದನ್ನು ಬದಲಾಯಿಸಲು ಸಹಾಯಕ ಇಂಜಿನಿಯರ್(ವಿ) ಗಂಡಸಿ ರವರಿಗೆ ಸೂಚಿಸಲಾಯಿತು.
4. ದೊಡ್ಡಯರಗನಾಳು ಗ್ರಾಮದ ನಿವಾಸಿಯಾದ ದಿನೇಶ್ ಎಂಬುವರು ತಮ್ಮ ಊರಿನ ಕೆರೆಯ ಮಧ್ಯಭಾಗದಲ್ಲಿ ಹಾದು ಹೋಗಿರುವ 11 ಕೆ.ವಿ. ಮಾರ್ಗವನ್ನು ಸೂಕ್ತ ಸ್ಥಳಕ್ಕೆ ರವಾನಿಸಬೇಕೆಂದು ಹಾಗು ರಸ್ತೆಯ ಮಾರ್ಗದಲ್ಲಿ ಜೋತು ಬಿದ್ದಿರುವ ವಾಹಕಗಳಿಗೆ ಮಧ್ಯಂತರ ಕಂಬ ಅಳವಡಿಸಲು ಅಹವಾಲು ನೀಡಿದ್ದು, ಸಹಾಯಕ ಇಂಜಿನಿಯರ್(ವಿ) ಗಂಡಸಿ ರವರಿಗೆ ಕೂಡಲೆ ಅಂದಾಜು ಪಟ್ಟಿಯನ್ನು ತಯಾರಿಸಿ ಉಪ–ವಿಭಾಗಕ್ಕೆ ಸಲ್ಲಿಸಲು ಸೂಚಿಸಲಾಯಿತು.
5. ಲಾಳನಕೆರೆ ಗ್ರಾಮದಲ್ಲಿರುವ ಕೆಲವು ಮನೆಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಇರುವುದಿಲ್ಲವೆಂದು ಗ್ರಾಮಸ್ಥರು ಮೌಖಿಕವಾಗಿ ತಿಳಿಸಲಾಯಿತು. ಜಾಗದ ತಕರಾರು ಇದ್ದು, ತಹಶೀಲ್ದಾರರಿಂದ ಫಾರಂ 54 ನಲ್ಲಿ ತೆಗೆದುಕೊಂಡು ಬಂದಲ್ಲಿ ವಿದ್ಯುತ್ ಸಂಪರ್ಕವನ್ನು ಕೊಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಲಹೆ ನೀಡಿದರು,
6. ಜಕ್ಕನಹಳ್ಳಿ ಗ್ರಾಮದ ನಿವಾಸಿಯಾದ ಕೃಷ್ಣೇಗೌಡರವರು ಐ.ಪಿ. ಸ್ಥಾವರದ 63 **KVA** ಪರಿವರ್ತಕ ವಿಫಲಗೊಂಡಿದ್ದು ಕೂಡಲೆ ಬದಲಾಯಿಸಲು ಶಾಖಾಧಿಕಾರಿರವರಿಗೆ ಸೂಚಿಸಲಾಯಿತು..

23/12/2021

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಸೆಸ್ಕ್ ಉಪ–ವಿಭಾಗ ಗಂಡಸಿ.

ಪ್ರತಿಗಳು.

*01. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ ಕಛೇರಿ, ಸೆಸ್ಕ್ ಹಾಸನ. ರವರ ಆದ್ಯ ಅವಗಾಹನೆಗಾಗಿ.*

*02. ಸಹಾಯಕ ಕಾರ್ಯಪಾಲಕ ಇಂಜಿನಿರ್(ವಿ), ಸೆಸ್ಕ್ ಉಪ–ವಿಭಾಗ ಗಂಡಸಿ ರವರ ಅವಗಾಹನೆಗಾಗಿ.*

*03. ಸಹಾಯಕ ಇಂಜಿನಿಯರ್(ತಾ) ಸೆಸ್ಕ್ ಉಪ–ವಿಭಾಗ ಗಂಡಸಿ. ರವರ ಮಾಹಿತಿಗಾಗಿ.*

*04. ಸಹಾಯಕ ಇಂಜಿನಿಯರ್(ವಿ) ಸೆಸ್ಕ್ ಗಂಡಸಿ/ಬಾಗೇಶಪುರ ಶಾಖೆ ರವರ ಮಾಹಿತಿಗಾಗಿ.*

*05. ಕಛೇರಿ ಪ್ರತಿ*